# ಸತ್ಯಕಾಮನ ಕಥೆ

## (ಛಾಂದೋಗ್ಯೋಪನಿಷತ್ತು)

ಸ್ವಾಮಿ ವೀರೇಶಾನಂದ



ಇನ್ನುಮುಂದೆ ನಾವು ಛಾಂದೋಗ್ಯ ಉಪನಿಷತ್ತಿನಲ್ಲಿ ಬರುವ ಕೆಲವು ಕಥೆಗಳನ್ನು ಅಧ್ಯಯನ ಮಾಡೋಣ. ಇಲ್ಲಿನ ಪ್ರತಿಯೊಂದು ಕಥೆಯೂ ಒಂದು ಶ್ರೇಷ್ಠ ತತ್ತ್ವವನ್ನು ಮತ್ತು ಸಾಧನೆಯ ಮಾರ್ಗವನ್ನು ತಿಳಿಸಿಕೊಡುತ್ತದೆ. ಇದಲ್ಲದೆ ಈ ಕಥೆಗಳು ಪ್ರಾಚೀನ ಭಾರತೀಯ ಸಮಾಜದ ರೀತಿನೀತಿಗಳು, ಸಂಪ್ರದಾಯಗಳು ಮತ್ತು ಸಾಂಸ್ಕೃತಿಕ ಅಂಶಗಳನ್ನು ಬಹಳ ಆಕರ್ಷಕವಾಗಿ ಬಿಂಬಿಸುತ್ತವೆ. ಹೀಗಾಗಿ ಛಾಂದೋಗ್ಯ ಉಪನಿಷತ್ತಿನ ಕಥೆಗಳು ಆಧ್ಯಾತ್ಮಿಕ ದರ್ಶನದ ದೀವಿಗೆಗಳಾಗಿವೆ ಮಾತ್ರವಲ್ಲದೆ, ಪ್ರಾಚೀನ ವೈದಿಕ ಸಂಸ್ಕೃತಿಯ ಆಕರಗಳೂ ಆಗಿವೆ. ಹೀಗಾಗಿ ಅವು ಉಪನಿಷತ್ ವಾಙ್ಮಯದಲ್ಲಿ ಬಹಳ ಪ್ರಮುಖವಾದ ಸ್ಥಾನವನ್ನು ಪಡೆದುಕೊಳ್ಳುತ್ತವೆ.

ಶ್ರದ್ಧೆ ಮತ್ತು ತಪಸ್ಸುಗಳು ಬ್ರಹ್ಮೋಪಾಸನೆಯ ಅವಿಭಾಜ್ಯ ಅಂಗಗಳು. ಇವುಗಳಿಲ್ಲದೆ ಸಾಧನೆಯನ್ನು ಮಾಡಲಾಗುವುದಿಲ್ಲ. ಸಾಧನೆಯನ್ನು ಮಾಡಲಾಗದೆ ಇರುವಾಗ, ಸಿದ್ಧಿ ಲಭಿಸುವುದಿಲ್ಲ. ಈ ಶ್ರದ್ಧೆ ಮತ್ತು ತಪಸ್ಸುಗಳ ಮಹತ್ವವನ್ನು ಒತ್ತಿಹೇಳಲು ಉಪನಿಷತ್ತು ಈ ಕಥೆಯನ್ನು ನಿರೂಪಿಸಿದೆ.

ಉಪನಿಷತ್ತು ಈ ಕಥೆಯನ್ನು ಹೀಗೆ ಆರಂಭಿಸುತ್ತದೆ: ಬಹಳ ಹಿಂದಿನ ಕಾಲದಲ್ಲಿ ನಡೆದ ಘಟನೆ ಇದು. ಸತ್ಯಕಾಮನೆಂಬ ಬಾಲಕನಿದ್ದನು. ಅವನಿಗೆ ವಿದ್ಯಾಭ್ಯಾಸ ಮಾಡಲು ಯೋಗ್ಯವಾದ ವಯಸ್ಸು ಬಂದಿತು. ಅವನು ತನ್ನ ತಾಯಿಯಾದ ಜಾಬಾಲೆಯನ್ನು ಕುರಿತು ಹೀಗೆ ಕೇಳಿಕೊಂಡನು: ''ಅಮ್ಮ, ನಾನು ಬ್ರಹ್ಮಚರ್ಯ ವ್ರತವನ್ನು ಕೈಗೊಳ್ಳಬೇಕು ಎಂದು ಬಯಸುತ್ತೇನೆ. ಅದಕ್ಕೆ ನನಗೆ ಉಪನಯನವಾಗಬೇಕು. ಅದಕ್ಕಾಗಿ ನನ್ನ ಗುರುಗಳಿಗೆ ನನ್ನ ಗೋತ್ರವನ್ನು (ವಂಶಾವಳಿ) ಹೇಳಬೇಕು. ಉಪನಯನವಾದ ನಂತರವಷ್ಟೇ ಗುರುಗಳು ನನಗೆ ವಿದ್ಯಾಭ್ಯಾಸವನ್ನು ಮಾಡಿಸುತ್ತಾರೆ. ಅಮ್ಮಾ, ನಾನು ಯಾವ ಗೋತ್ರದವನು, ದಯವಿಟ್ಟು ಹೇಳುವೆಯಾ?''

ಅದಕ್ಕೆ ಸತ್ಯಕಾಮನ ತಾಯಿಯು ಹೀಗೆ ಹೇಳಿದಳು : ''ಮಗೂ, ನೀನು ಯಾವ ಗೋತ್ರದವನೋ, ನಾನು ಅದನ್ನು ಅರಿಯೆನು, ಅಪ್ಪಾ. ನಾನು ಒಬ್ಬ ಪರಿಚಾರಿಣಿ. ನನ್ನ ಗಂಡನ ಮನೆಯಲ್ಲಿ , ಬರುವ ಅತಿಥಿ ಅಭ್ಯಾಗತರ ಸೇವೆ ಮಾಡುತ್ತ ಬಹಳ ವ್ಯಸ್ತಳಾಗಿದ್ದೆ. ನಿನ್ನನ್ನು ನನ್ನ ಯೌವನಕಾಲದಲ್ಲಿ ನಾನು ಪಡೆದುಕೊಂಡೆನು. ಹೀಗಾಗಿ ಗೋತ್ರಾದಿಗಳು ಯಾವುವು ಎಂದು ನೆನಪಿನಲ್ಲಿ ಇಟ್ಟುಕೊಳ್ಳುವ ಮನಸ್ಸು ನನಗೆ ಆಗ ಇರಲಿಲ್ಲ. ಆ ಕಾಲದಲ್ಲಿಯೇ ದುರದೃಷ್ಟವಶಾತ್ ನಿನ್ನ ತಂದೆಯು ಗತಿಸಿದನು. ನಾನು ಅನಾಥೆಯಾಗಿಬಿಟ್ಟೆನು. ಮಗೂ ಈ ವಿಷಯದಲ್ಲಿ ನಾನು

ಅಸಹಾಯಕಿಯಾಗಿದ್ದೇನೆ. ಮಗೂ, ನಿನ್ನ ಗುರುಗಳು ಕರುಣಾವಂತರು, ದಯೆಯುಳ್ಳವರು. ಅವರು ಗೋತ್ರವನ್ನು ಕೇಳಿದರೆ, ನಾನು ಇಷ್ಟನ್ನು ಹೇಳಿದೆನೆಂದು ಹೇಳು : ನಿನ್ನ ಹೆಸರು ಸತ್ಯಕಾಮ ಎಂದು. ನನ್ನ ಹೆಸರು ಜಾಬಾಲೆ ಎಂದು. ನಿನ್ನ ಪೂರ್ಣ ನಾಮಧೇಯವು ಸತ್ಯಕಾಮ ಜಾಬಾಲ.''

ಮುಗ್ಧನಾದ ಆ ಪುಟ್ಟ ಹುಡುಗನು, ''ಹಾಗೆಯೇ ಆಗಲಮ್ಮಾ'' ಎಂದು ತಲೆಯಾಡಿಸಿದನು. ತಾಯಿಗೆ ದೀರ್ಘದಂಡ ನಮಸ್ಕಾರ ಮಾಡಿ, ಅವಳ ಒಪ್ಪಿಗೆಯನ್ನು ಪಡೆದುಕೊಂಡು, ಗುರುಗಳಾದ ಹಾರಿದ್ರುಮತ ಗೌತಮರ ಆಶ್ರಮಕ್ಕೆ ಹೊರಟನು. ಆಶ್ರಮವನ್ನು ಸೇರಿದನು. ಗುರುಗಳು ಗಭೀರವಾದ ಧ್ಯಾನದಲ್ಲಿ ಮುಳುಗಿದ್ದರು. ಸತ್ಯಕಾಮನು ಕೈಮುಗಿದು, ಗುರುಗಳ ಪಕ್ಕದಲ್ಲಿಯೇ ನಿಂತುಕೊಂಡನು. ಬಹಳ ಕಾಲವಾದ ಮೇಲೆ ಗುರುಗಳು ಧ್ಯಾನದಿಂದ ಮೇಲೆದ್ದರು. ತಮ್ಮ ಮುಂದುಗಡೆ ವಿನಯದಿಂದ ಕೈಮುಗಿದುಕೊಂಡಿದ್ದ ಬಾಲಕನನ್ನು ನೋಡಿದರು.

''ಮಗೂ, ನೀನು ಯಾರಪ್ಪಾ? ನನ್ನಿಂದ ನಿನಗೆ ಏನಾಗಬೇಕು?'' ಎಂದು ಮಧುರವಾದ ಧ್ವನಿಯಲ್ಲಿ ಕೇಳಿದರು.

''ಗುರುಗಳೇ, ನಾನು ನಿಮ್ಮ ಬಳಿ ಬ್ರಹ್ಮಚರ್ಯ ವ್ರತನ್ನು ಪರಿಪಾಲಿಸುತ್ತ, ವೇದಾಧ್ಯಯನ ಮಾಡಬೇಕೆಂದು ಇಚ್ಛಿಸುತ್ತೇನೆ. ದಯವಿಟ್ಟು ನನಗೆ ಉಪನಯನವನ್ನು ಮಾಡಿಸಿರಿ. ನಿಮ್ಮ ಶಿಷ್ಯನನ್ನಾಗಿ ಸ್ವೀಕರಿಸಿ, ವೇದಾಧ್ಯಯನವನ್ನು ಮಾಡಿಸಿರಿ.''

''ಮಗೂ, ನೀನು ಯಾವ ಗೋತ್ರದವನಪ್ಪಾ? ಕುಲಗೋತ್ರಗಳನ್ನು ಅರಿತುಕೊಂಡು ತಾನೇ ನಾವು ಶಿಷ್ಯನಿಗೆ ಉಪನಯನ ಮಾಡಿಸಬೇಕು.''

ಆಗ ಸತ್ಯಕಾಮನು ಸ್ವಲ್ಪವೂ ಭಯಪಡದೆಯೇ, ಆತ್ಮವಿಶ್ವಾಸದಿಂದ ಸತ್ಯವನ್ನೇ ಹೇಳಿದನು, ''ಭಗವನ್, ನನ್ನ ಗೋತ್ರ ಯಾವುದು ಎಂದು ನನಗೆ ತಿಳಿಯದು. ನನ್ನ ತಾಯಿಯನ್ನು ಈ ಬಗ್ಗೆ ನಾನು ಕೇಳಿದೆನು. ಅವಳು ಹೀಗೆ ಹೇಳಿದಳು: 'ನಾನು ಯೌವನದಲ್ಲಿ ಮನೆಯವರ ಸೇವೆ ಮಾಡಿಕೊಂಡಿರುವಾಗ ನಿನ್ನನ್ನು ಪಡೆದುಕೊಂಡೆನು. ಹೀಗಾಗಿ ನೀನು ಯಾವ ಗೋತ್ರದವನಾಗಿರುವೆಯೋ ನಾನು ಅರಿಯೆನು. ನನ್ನ ಹೆಸರು ಜಾಬಾಲೆ. ನೀನು ಸತ್ಯಕಾಮ.' ಗುರುಗಳೇ, ಇಷ್ಟನ್ನು ಬಿಟ್ಟು ನನಗೆ ಗೋತ್ರದ ಬಗ್ಗೆ ಬೇರೆ ಏನೂ ಗೊತ್ತಿಲ್ಲ. ಭಗವನ್, ನಿಮಗೆ ನಮಸ್ಕಾರ ಮಾಡಿ ಹೇಳುತ್ತೇನೆ. ನಾನು ಸತ್ಯಕಾಮ ಜಾಬಾಲನು. ದಯವಿಟ್ಟು ನನಗೆ ನೀವು ಉಪನಯನ ಮಾಡಬೇಕು.''

ಇದನ್ನು ಕೇಳಿ ಹಾರಿದ್ರುಮತ ಗೌತಮರ ಮನಸ್ಸು ಸ್ವಲ್ಪ ಕಳವಳಕ್ಕೆ ಒಳಗಾಯಿತು. ಮುಖದಲ್ಲಿ ಚಿಂತೆಯ ಸುಕ್ಕುಗಳು ಕಾಣಿಸಿಕೊಂಡವು. ಸ್ವಲ್ಪಹೊತ್ತು ಚಿಂತಿಸಿದರು. 'ಗೋತ್ರವೇ ಗೊತ್ತಿಲ್ಲದ ಹುಡುಗನಿಗೆ ಉಪನಯನ ಮಾಡಿಸುವುದಾದರೂ ಹೇಗೆ? ಇದು ಸಂಪ್ರದಾಯಕ್ಕೆ ಹೊರತಾದ ವಿಚಾರವಾಗುವುದಲ್ಲಾ! ಆದರೆ ಈ ಬಾಲಕನು ಶ್ರದ್ಧೆಯಿಂದ ಕೂಡಿದ್ದಾನೆ. ಇದಕ್ಕಿಂತ ಹೆಚ್ಚಾಗಿ, ಗುರುಕುಲವನ್ನು ಸೇರಲು ಇವನು ಸುಳ್ಳು ಹೇಳಲಿಲ್ಲ. ತನ್ನ ತಾಯಿಯು ಹೇಳಿದ್ದನ್ನೇ ಯಥಾವತ್ತಾಗಿ ನನ್ನ ಎದುರಿಗೆ ಬಿನ್ನವಿಸಿದ್ದಾನೆ. ಇವನು ಸತ್ಯನಿಷ್ಠನಾಗಿದ್ದಾನೆ. ಇದರ ಜೊತೆಗೆ ಶ್ರದ್ಧಾವಂತನೂ ಆಗಿದ್ದಾನೆ. ಹೀಗಾಗಿ ಇವನು ಖಂಡಿತ ಉತ್ತಮಕುಲದವನೇ ಆಗಿರಬೇಕು. ಬ್ರಾಹ್ಮಣನಲ್ಲದವನು ಈ ರೀತಿ ನಡೆದುಕೊಳ್ಳುವುದಿಲ್ಲ. ಇವನು ಖಂಡಿತವಾಗಿಯೂ ಬ್ರಾಹ್ಮಣನೇ. ಏನೇ ಆಗಲಿ, ಇವನಿಗೆ ನಾನು ಉಪನಯನವನ್ನು ಮಾಡಿಯೇ ತೀರುತ್ತೇನೆ. ಇದು ಶಾಸ್ತ್ರವಿರುದ್ಧವಾಗುವುದಿಲ್ಲ.'

ಹೀಗೆ ಯೋಚಿಸಿದ ಗುರುಗಳು ಸತ್ಯಕಾಮನಿಗೆ ಹೇಳಿದರು: ''ಸೋಮ್ಯ*, ಸಮಿತ್ತನ್ನು ತೆಗೆದುಕೊಂಡು ಬಾ. ನಿನಗೆ ಉಪನಯನವನ್ನು ಮಾಡಿಸುತ್ತೇನೆ. ನೀನು ನಿಜವಾಗಿಯೂ ಬ್ರಹ್ಮಚರ್ಯ ವ್ರತಧಾರಣೆಗೆ ತಕ್ಕ ವಿದ್ಯಾರ್ಥಿಯಾಗಿದ್ದೀಯೆ. ಸತ್ಯನಿಷ್ಠೆಯೇ ಒಬ್ಬ ಬ್ರಾಹ್ಮಣನಿಗೆ ಇರಬೇಕಾದ ನಿಜವಾದ ಅರ್ಹತೆ. ಇಂಥ ಸತ್ಯಮಾರ್ಗದಿಂದ ನೀನು ಚಲಿಸಲಿಲ್ಲ. ಆದ್ದರಿಂದ ಉಪನಯನ ಸಂಸ್ಕಾರಕ್ಕೆ ಬೇಕಾದ ಹೋಮಕ್ಕಾಗಿ ಸಮಿತ್ತನ್ನು ತೆಗೆದುಕೊಂಡು ಬಾ.''

ಗುರುಗಳ ಆಜ್ಞೆಯಂತೆ, ಸತ್ಯಕಾಮನು ಉಪನಯನ ಸಂಸ್ಕಾರದ ಹೋಮಕ್ಕಾಗಿ ಸಮಿತ್ತುಗಳನ್ನು ಆರಿಸಿಕೊಂಡು ತಂದುಕೊಟ್ಟನು. ಆ ಸಮಿತ್ತುಗಳನ್ನು ಉಪಯೋಗಿಸಿಕೊಂಡು, ಗುರುಗಳು ಹೋಮವನ್ನು ಮಾಡಿ, ತಮ್ಮ ವಿದ್ಯಾರ್ಥಿಗೆ ಉಪನಯನವನ್ನು ಮಾಡಿಸಿದರು.

ಉಪನಯನವನ್ನು ಮಾಡಿಸಿ, ಗುರುಗಳು ವೇದಾಭ್ಯಾಸಕ್ಕೆ ಶಿಷ್ಯನನ್ನು ತೊಡಗಿಸಬೇಕು. ಆದರೆ ಹಾರಿದ್ರುಮತ ಗೌತಮರು ಮಾಡಿದ್ದೇ ಬೇರೆ. ಅವರು ತಮ್ಮ ಕೊಟ್ಟಿಗೆಯಿಂದ ಬಡಕಲು ಬಡಕಲಾಗಿದ್ದ ನಾನೂರು ಗೋವುಗಳನ್ನು ಆರಿಸಿದರು. ಅವುಗಳನ್ನು ಹಸುಗಳ ಹಿಂಡಿನಿಂದ ತೆಗೆಯಿಸಿದರು. ''ಸೋಮ್ಯ, ಈ ಗೋವುಗಳನ್ನು ಹಿಂಬಾಲಿಸಿಕೊಂಡು ಹೋಗು. ಅವುಗಳನ್ನು ಕಾಡಿಗೆ ಹೊಡೆದುಕೊಂಡು ಹೋಗಿ, ಮೇಯಿಸುತ್ತಿರು'' ಎಂದು ಆಜ್ಞೆಮಾಡಿದರು.

ಸತ್ಯಕಾಮನು ಗುರುಗಳ ಆಜ್ಞೆಯಿಂದ ಬಹಳ ಸಂತೋಷಗೊಂಡನು. ಉತ್ಸಾಹದಿಂದ ತನ್ನ ಮನಸ್ಸಿನಲ್ಲಿ ಹೀಗೆ ಪ್ರತಿಜ್ಞೆ ಮಾಡಿಕೊಂಡನು: ''ಈ ಹಸುಗಳ ಸಂಖ್ಯೆಯನ್ನು ಸಾವಿರಕ್ಕೆ ಏರಿಸುವೆನು. ಅಲ್ಲಿಯವರೆಗೆ ನಾನು ಕಾಡಿನಿಂದ ಆಶ್ರಮಕ್ಕೆ ಹಿಂದಿರುಗುವುದಿಲ್ಲ.''

ಹೀಗೆ ಅಂದುಕೊಂಡು, ಸತ್ಯಕಾಮನು ಗುರುಗಳು ಕೊಟ್ಟ ನಾಲ್ಕುನೂರು ಗೋವುಗಳನ್ನು ಹುಲ್ಲು ಮತ್ತು ನೀರು ಹೆಚ್ಚಾ

* ಸೋಮ್ಯ ಎಂದರೆ ಸೌಮ್ಯ ಸ್ವಭಾವದವನು, ಮೃದುವಾಗಿ ಮಾತನಾಡುವವನು ಎಂದರ್ಥ.

ಗಿರುವ ಹಾಗೂ ತುಂಬ ಶೀತ ಅಥವಾ ಉಷ್ಣವಿಲ್ಲದೆ ಇರುವ ಕಾಡಿನ ಪ್ರದೇಶಕ್ಕೆ ಹೊಡೆದುಕೊಂಡು ಹೋದನು. ಪಾಪ! ಈ ಹುಡುಗನು ಗೋವುಗಳು ಸಾವಿರ ಸಂಖ್ಯೆಯಾಗುವವರೆಗೆ ಹಲವು ವರ್ಷಗಳ ಕಾಲ ಕಾಯಬೇಕಾಯಿತು. ಅಲ್ಲಿಯವರೆಗೆ ಅವನು ಕಾಡಿನಲ್ಲಿಯೇ ಹಸುಗಳ ಮಧ್ಯದಲ್ಲಿ ವಾಸಿಸುತ್ತಿದ್ದನು. ಕೆಲವು ವರ್ಷಗಳ ನಂತರ, ಗೋವುಗಳು ಸಾವಿರವಾದವು.

ಆಗ ಒಂದು ದಿನ ಸಾಯಂಕಾಲ ಆ ಹಸುಗಳ ಹಿಂಡಿನಲ್ಲಿ ಇದ್ದ ಒಂದು ಎತ್ತು ಮನುಷ್ಯರಂತೆ ಮಾತನಾಡಲು ಆರಂಭಿಸಿತು. ದಿಕ್ಕಿನ ಸಂಬಂಧವನ್ನು ಹೊಂದಿರುವ ವಾಯುದೇವನೇ ಈ ಎತ್ತಿನ ಒಳಗೆ ಹೊಕ್ಕನು. ಅವನು ಶ್ರದ್ಧೆ ಮತ್ತು ತಪಸ್ಸುಗಳಿಂದ ಪರಿಪೂತ ನಾಗಿದ್ದ ಸತ್ಯಕಾಮನನ್ನು ಕಂಡು ಸಂತೋಷಗೊಂಡಿದ್ದನು. ಅವನೇ ಸತ್ಯಕಾಮನನ್ನು ಮಾತನಾಡಿಸಲು ಆರಂಭಿಸಿದನು.

ಎತ್ತು, ''ಸತ್ಯಕಾಮಾ..'' ಎಂದು ಕೂಗಿ ಕರೆಯಿತು. ಎತ್ತಿನಲ್ಲಿ ಯಾವುದೋ ದೇವತೆಯೇ ಸೇರಿಕೊಂಡು, ತನ್ನನ್ನು ಕರೆಯು ತ್ತಿದ್ದಾನೆ ಎಂದು ಅರಿತುಕೊಂಡ ಸತ್ಯಕಾಮನು, ''ಭಗವನ್, ಇದೋ ನಿಮ್ಮ ಸೇವೆಗೆ ನಿಂತುಕೊಂಡಿದ್ದೇನೆ'' ಎಂದು ಬಿನ್ನವಿಸಿ ಕೊಂಡನು. ಎತ್ತು ಮುಂದುವರೆಯಿತು, ''ಮಗೂ, ಸತ್ಯಕಾಮ, ನಾವು, ಗೋವುಗಳ ಹಿಂಡು, ಈಗ ಸಾವಿರವಾಗಿದ್ದೇವೆ. ನಿನ್ನ ಪ್ರತಿಜ್ಞೆಯು ಪೂರ್ಣವಾಯಿತು. ನಮ್ಮನ್ನೆಲ್ಲ ಆಚಾರ್ಯರ ಮನೆಗೆ ಸೇರಿಸಿಬಿಡಪ್ಪಾ.''

ಎತ್ತಿನ ದೇಹದಲ್ಲಿದ್ದ ವಾಯುದೇವನು ಇಷ್ಟಕ್ಕೇ ನಿಲ್ಲಲಿಲ್ಲ. ಸತ್ಯಕಾಮನಿಗೆ ಹೀಗೆ ಉಪದೇಶ ಮಾಡಲು ಆರಂಭಿಸಿದನು: ''ಸೋಮ್ಯನೇ, ನಾನು ನಿನಗೆ ಪರಬ್ರಹ್ಮತತ್ತ್ವದ ಒಂದು ಪಾದ ವನ್ನು ಹೇಳಿಕೊಡುತ್ತೇನೆ. ಈ ಪಾದದಲ್ಲಿ ನಾಲ್ಕು ಕಲೆಗಳಿವೆ. ಪೂರ್ವ ದಿಕ್ಕು ಒಂದು ಕಲೆ. ಪಶ್ಚಿಮ ದಿಕ್ಕು ಒಂದು ಕಲೆ. ದಕ್ಷಿಣ ದಿಕ್ಕು ಒಂದು ಕಲೆ ಹಾಗೂ ಉತ್ತರ ದಿಕ್ಕು ಒಂದು ಕಲೆ. ನಾಲ್ಕು ಕಲೆಗಳಿರುವ ಬ್ರಹ್ಮತತ್ತ್ವದ ಈ ಪಾದಕ್ಕೆ 'ಪ್ರಕಾಶವಾನ್' ಎಂದು ಹೆಸರು. ಮಗೂ, ಬ್ರಹ್ಮತತ್ತ್ವದ ಈ ಪಾದವನ್ನು ಯಾರು ಉಪಾ ಸನೆ ಮಾಡುತ್ತಾನೆಯೋ, ಅವನು ಈ ಲೋಕದಲ್ಲಿ ಪ್ರಕಾಶವುಳ್ಳವ ನಾಗುತ್ತಾನೆ; ತೇಜಸ್ಸಿನಿಂದ ಬೆಳಗುತ್ತಾನೆ. ಹಾಗೆಯೇ ದೇಹತ್ಯಾಗ ಮಾಡಿದ ಮೇಲೆ ಪ್ರಕಾಶಮಯವಾದ ಲೋಕಗಳನ್ನೇ ಗೆದ್ದು ಕೊಳ್ಳುತ್ತಾನೆ. ''

ಎತ್ತಿನಲ್ಲಿ ಇದ್ದ ವಾಯುದೇವನು ಮತ್ತೂ ಹೇಳಿದನು: ''ಮಗೂ, ಅಗ್ನಿದೇವನು ಬ್ರಹ್ಮತತ್ತ್ವದ ಇನ್ನೊಂದು ಪಾದವನ್ನು ನಿನಗೆ ಹೇಳಿಕೊಡುವನು.''

ರಾತ್ರಿ ಕಳೆದು ಬೆಳಗಾಯಿತು. ಸತ್ಯಕಾಮನು ಗೋವುಗಳನ್ನು ಹೊಡೆದುಕೊಂಡು ಹೊರಟನು. ದಿನವೆಲ್ಲ ದನಗಳನ್ನು ಕಾಯಿಸು ವುದರಲ್ಲಿಯೇ ಕಳೆದುಹೋಯಿತು. ಸಾಯಂಕಾಲ ಹಸುಗಳೆಲ್ಲ ಒಟ್ಟಾದವು. ಸತ್ಯಕಾಮನು ಹಸುಗಳನ್ನೆಲ್ಲ ವಿಶ್ರಾಂತಿಗೆ ಬಿಟ್ಟು,



ಅಗ್ನಿಯನ್ನು ಹೊತ್ತಿಸಿದನು. ಅಗ್ನಿಯ ಮುಂದುಗಡೆ, ಅದರ ಹತ್ತಿರದಲ್ಲಿಯೇ ಪೂರ್ವಾಭಿಮುಖವಾಗಿ ಕುಳಿತುಕೊಂಡನು.

ಈಗ ಅಗ್ನಿದೇವತೆಯು ಸತ್ಯಕಾಮನನ್ನು ಸಂಬೋಧಿಸಿ ದನು. ''ಸತ್ಯಕಾಮಾ..'' ಎಂದು ಕೂಗಿ ಕರೆಯಿತು. ಅದಕ್ಕೆ ಪ್ರತಿ ಯಾಗಿ ವಿನಯದಿಂದ ಸತ್ಯಕಾಮನು ಹೇಳಿದನು: ''ಭಗವಂತನೇ.''

''ಮಗೂ, ನಿನಗೆ ಬ್ರಹ್ಮತತ್ತ್ವದ ಇನ್ನೊಂದು ಪಾದವನ್ನು ಹೇಳಿಕೊಡುವೆನು'' ಎಂದಿತು ಅಗ್ನಿದೇವತೆ.

''ಪೂಜ್ಯರೇ, ದಯವಿಟ್ಟು ಹೇಳಿಕೊಡಿ'' ಎಂದು ಸತ್ಯ ಕಾಮನು ವಿನಯದಿಂದ ಹೇಳಿದನು.

ಅಗ್ನಿಯು ಹೀಗೆ ಉಪದೇಶ ಮಾಡಿದನು: ''ಪೃಥಿವಿಯು ಒಂದು ಕಲೆ. ಅಂತರಿಕ್ಷವು ಒಂದು ಕಲೆ. ದ್ಯುಲೋಕವು ಒಂದು ಕಲೆ. ಸಮುದ್ರವು ಒಂದು ಕಲೆ. ಇದೇ, ಸೋಮ್ಯ, ಅನಂತವಾನ್ ಎಂಬ ಚತುಷ್ಕಲಪಾದವಿರುವ ಬ್ರಹ್ಮನ ಒಂದು ಪಾದವು.''

ಮುಂದುವರೆದು, ಅಗ್ನಿದೇವತೆಯು ಹೇಳಿತು: ''ಯಾವನು ಬ್ರಹ್ಮದ ಅನಂತವಾನ್ ಎಂಬ ಪಾದವನ್ನು ಉಪಾಸನೆ ಮಾಡು ವನೋ, ಅವನು ಈ ಲೋಕದಲ್ಲಿ ಅನಂತವಂತನಾಗುತ್ತಾನೆ. ಅವನು ದೇಹತ್ಯಾಗಮಾಡಿದ ಮೇಲೆ ಅಂತ್ಯವಿಲ್ಲದ ಲೋಕ ಗಳನ್ನು ಗೆದ್ದುಕೊಳ್ಳುತ್ತಾನೆ.''

ಹೀಗೆಯೇ ಇನ್ನೊಂದು ಸಾಯಂಕಾಲದ ದಿವಸ, ಹಂಸ ಪಕ್ಷಿಯಲ್ಲಿ ಇರುವ ಆದಿತ್ಯನು ಜ್ಯೋತಿಷ್ಮಾನ್ ಎಂಬ ಬ್ರಹ್ಮನ

ಚತುಷ್ಕಲಪಾದವನ್ನು ಸತ್ಯಕಾಮನಿಗೆ ಉಪದೇಶಿಸಿದನು. ಇದರ ಉಪಾಸನೆಯಿಂದ ಒಬ್ಬ ವ್ಯಕ್ತಿಯು ಜ್ಯೋತಿವಂತನಾಗುತ್ತಾನೆ. ಹಾಗೆಯೇ ದೇಹವನ್ನು ತ್ಯಾಗಮಾಡಿದ ಮೇಲೆ ಜ್ಯೋತಿಯುಳ್ಳ ಲೋಕಗಳನ್ನು ಗೆದ್ದುಕೊಳ್ಳುತ್ತಾನೆ.

ಕಡೆಯದಾಗಿ, ಮದ್ಗು ಎಂಬ ಜಾತಿಯ ನೀರುಪಕ್ಷಿಯಲ್ಲಿದ್ದ ಪ್ರಾಣದೇವನು ಆಯತನವಾನ್ ಎಂಬ ಬ್ರಹ್ಮದ ಇನ್ನೊಂದು ಪಾದವನ್ನು ಹೇಳಿಕೊಟ್ಟನು. ಇದರ ಉಪಾಸನೆಯಿಂದ ಸಾಧಕನು ಒಳ್ಳೆಯ ಆಶ್ರಯವನ್ನು ಪಡೆದುಕೊಳ್ಳುತ್ತಾನೆ. ಹಾಗೆಯೇ ಮರಣದ ನಂತರ, ಒಳ್ಳೆಯ ಆಶ್ರಯವುಳ್ಳ ಲೋಕಗಳನ್ನು ಗೆದ್ದುಕೊಳ್ಳುತ್ತಾನೆ.


ಹೀಗೆ ದೇವತೆಗಳಿಂದ ವಿದ್ಯೆಯನ್ನು ಪಡೆದುಕೊಂಡು, ಸತ್ಯಕಾಮನು ಆಚಾರ್ಯರ ಮನೆಗೆ ಹೊರಟನು. ಆಚಾರ್ಯನು ಸತ್ಯಕಾಮನ ತೇಜಃಪುಂಜವಾದ ಮುಖವನ್ನು ನೋಡಿ, ಆಶ್ಚರ್ಯಪಟ್ಟನು. ಇವನು ಬ್ರಹ್ಮವಿದನಂತೆ ಕಾಣುತ್ತಾನಲ್ಲ! ಇವನಿಗೆ ನಾನು ವಿದ್ಯೆಯನ್ನೇನೂ ಹೇಳಿಕೊಟ್ಟಿಲ್ಲ. ಹಾಗಿದ್ದರೂ ಇವನು ವಿದ್ಯೆಯನ್ನು ಸಂಪಾದಿಸಿದ್ದಾನೆ. ಹೇಗೆ ತಾನೇ ಇದು ಸಾಧ್ಯ? ಎಂದುಕೊಂಡನು. ನೇರವಾಗಿ ಸತ್ಯಕಾಮನನ್ನೇ ಕೇಳಿದನು: ''ಸೋಮ್ಯ, ನೀನು ಬ್ರಹ್ಮವಿದನಂತೆ ಕಾಣುತ್ತಿರುವೆ. ನಿನಗೆ ಬ್ರಹ್ಮವಿದ್ಯೆಯನ್ನು ಹೇಳಿಕೊಟ್ಟವರು ಯಾರಪ್ಪಾ?'' ಸತ್ಯಕಾಮನು ವಿನಯದಿಂದ ಹೇಳಿಕೊಂಡನು: ''ಭಗವನ್, ಮನುಷ್ಯರಾರೂ ನನಗೆ ಬ್ರಹ್ಮವಿದ್ಯೆಯನ್ನು ಹೇಳಿಕೊಟ್ಟಿಲ್ಲ. ನನ್ನ ಇಚ್ಛೆಯೇನೆಂದರೆ, ಪೂಜ್ಯರಾದ ತಾವೇ ನನಗೆ ವಿದ್ಯೆಯನ್ನು ಹೇಳಿಕೊಡಬೇಕು. ಮಿಕ್ಕವರು ಹೇಳಿದ್ದರಿಂದೇನು? ನಾನು ಅದನ್ನು ಲೆಕ್ಕಕ್ಕೆ ತರುವವನಲ್ಲ.''



ಇದಲ್ಲದೆ ಇನ್ನೊಂದು ಮಹತ್ವವಾದ ವಿಷಯವನ್ನು ಸತ್ಯಕಾಮನು ಹೇಳುತ್ತಾನೆ, ''ಗುರುಗಳೇ ತಮ್ಮಂಥ ಆಚಾರ್ಯರಿಂದಲೇ ಕೇಳಿ ತಿಳಿದಿದ್ದೇನೆ. ಅದೇನೆಂದರೆ, ಒಬ್ಬ ವ್ಯಕ್ತಿಯು ತನ್ನ ಆಚಾರ್ಯರಿಂದಲೇ ವಿದ್ಯೆಯನ್ನು ಕೇಳಿ ತಿಳಿಯಬೇಕು. ಏಕೆಂದರೆ, ಆಚಾರ್ಯನಿಂದ ಅರಿತುಕೊಂಡ ವಿದ್ಯೆಯು ಮಾತ್ರವೇ ಸಿದ್ಧಿಯನ್ನು ತಂದುಕೊಡುತ್ತದೆ. ಇತರರ ಮೂಲಕ ಕೇಳಿಸಿಕೊಂಡ ವಿದ್ಯೆಯಿಂದ ಉದ್ದೇಶವನ್ನು ಸಾಧಿಸಲು ಸಾಧ್ಯವಿಲ್ಲ.''

ಸತ್ಯಕಾಮನ ಈ ಮಾತುಗಳನ್ನು ಕೇಳಿ, ಆಚಾರ್ಯರಾದ ಹಾರಿದ್ರುಮತ ಗೌತಮರು ಬಹಳ ಸಂತೋಷಪಟ್ಟರು. ತಮ್ಮ ಶಿಷ್ಯನು ಶ್ರದ್ಧೆಯಿಂದ ಕೂಡಿದ್ದಾನೆ; ಇಷ್ಟೆಲ್ಲ ಕಷ್ಟಕರವಾದ ಕೆಲಸವನ್ನು ಕೊಟ್ಟರೂ ತಪಸ್ಸಿನ ಭಾವನೆಯಿಂದ ಅದನ್ನು ಮಾಡಿದ್ದಾನೆ. ಶ್ರದ್ಧೆ ಮತ್ತು ತಪಸ್ಸುಗಳಿಂದ ಕೂಡಿಕೊಂಡಿರುವ ಇವನು ಬ್ರಹ್ಮವಿದ್ಯೆಯನ್ನು ಕಲಿತುಕೊಳ್ಳುವುದಕ್ಕೆ ಅರ್ಹನಾದ ವಿದ್ಯಾರ್ಥಿ ಎಂದು ಅವರು ಭಾವಿಸಿದರು. ದೇವತೆಗಳು ಹೇಳಿಕೊಟ್ಟ ಷೋಡಶಕಲಾ ವಿದ್ಯೆಯನ್ನೇ ತಾವೂ ಸತ್ಯಕಾಮನಿಗೆ ಬೋಧಿಸಿದರು. ತನ್ನ ಆಚಾರ್ಯರಿಂದ ಉಪದೇಶ ಮಾಡಿಸಿಕೊಂಡ ಸತ್ಯಕಾಮನಿಗೆ ಆ ವಿದ್ಯೆ ಸ್ವಲ್ಪವೂ ಮರೆತುಹೋಗಲಿಲ್ಲ. ಅದು ತನ್ನ ಪೂರ್ಣ ಪ್ರಯೋಜನವನ್ನು ಉಂಟುಮಾಡಿತು. ಸತ್ಯಕಾಮನು ಬ್ರಹ್ಮಜ್ಞನಾದನು, ಬ್ರಹ್ಮತೇಜನಾದನು, ಜಗದ್ವಂದ್ಯನಾದನು.

## ಯುವಚೇತನ



ವಿಶ್ವಧರ್ಮದ ಆದರ್ಶ ಎಂದರೆ ಅರ್ಥವೇನು? ಯಾವುದೋ ಒಂದು ವಿಶ್ವತತ್ತ್ವವಲ್ಲ, ಒಂದು ವಿಶ್ವಪುರಾಣವಲ್ಲ, ಒಂದು ಸಾರ್ವತ್ರಿಕ ಕ್ರಿಯಾಕರ್ಮವಲ್ಲ; ನಾನು ಹೇಳುವುದೇನೆಂದರೆ, ಚಕ್ರದೊಳಗೊಂದು ಚಕ್ರವಿರುವ ಯಂತ್ರದ ಹಾಗೆ, ಈ ಪ್ರಪಂಚ ಮುಂದುವರಿಯಬೇಕು. ನಾವೇನು ಮಾಡಬಲ್ಲೆವು? ನಾವು ಅದನ್ನು ನಯವಾಗಿ ನಡೆಯುವಂತೆ ಮಾಡಬಹುದು. ಚಕ್ರಗಳಿಗೆ ಎಣ್ಣೆ ಸವರಿ ಘರ್ಷಣೆ ಕಡಿಮೆಯಾಗುವಂತೆ ಮಾಡುವುದು ಹೇಗೆ? ವೈವಿಧ್ಯತೆಯನ್ನು ಸ್ವೀಕರಿಸುವ ಮೂಲಕ. ನಮ್ಮ ಸ್ವಭಾವದಲ್ಲಿರುವ ಏಕತೆಯನ್ನು ನಾವು ಹೇಗೆ ಪರಿಗಣನೆಗೆ ತಂದುಕೊಂಡಿರುವೆವೋ, ಹಾಗೆಯೇ ವೈವಿಧ್ಯತೆಗೂ ಮನ್ನಣೆ ಕೊಡಬೇಕು. ಸತ್ಯವನ್ನು ಸಾವಿರ ರೀತಿಗಳಲ್ಲಿ ಅಭಿವ್ಯಕ್ತಿಗೊಳಿಸಬಹುದಾದರೂ, ಅದರಲ್ಲಿ ಪ್ರತಿಯೊಂದೂ ನಿಜ ಎನ್ನುವುದನ್ನು ನಾವು ಕಲಿತುಕೊಳ್ಳಬೇಕು. ಒಂದನ್ನೇ ನೂರಾರು ದೃಷ್ಟಿಗಳಿಂದ ನೋಡಬಹುದಾದರೂ, ಅದು ಒಂದೇ ಆಗಿ ಉಳಿದಿದೆ ಎನ್ನುವುದನ್ನು ತಿಳಿಯಬೇಕು.

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಭಾಗ ೯, ಪು.೫೨೭)*